# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1348* |
| ಸದಸ್ಯರ ಹೆಸರು | ಶ್ರೀ ಟಿ.ಎ.ಶರವಣ |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹೊರ ರಾಜ್ಯಗಳಲ್ಲಿ ಮುಜರಾಯಿ ಇಲಾಖೆಯ ಆಸ್ತಿಗಳಾವುವು; ಸದರಿ ಆಸ್ತಿಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು; (ಕಟ್ಟಡವಾರು ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು)</td><td>
ಹೊರ ರಾಜ್ಯಗಳಲ್ಲಿರುವ ಮುಜರಾಯಿ ಇಲಾಖೆಯ ಕರ್ನಾಟಕ ರಾಜ್ಯ ಛತ್ರದ ಆಸ್ತಿ/ಜಾಗದ ವಿವರ ಮತ್ತು ಸದರಿ ಆಸ್ತಿಯಲ್ಲಿರುವ ಕಟ್ಟಡಗಳಿಂದ 2023-24ನೇ ಸಾಲಿನಲ್ಲಿ ಸ್ವೀಕೃತವಾಗಿರುವ ಆದಾಯ ರೂ.3,78,52,810-00 ಗಳು ಮತ್ತು 2024-25ನೇ ಸಾಲಿನ ಆದಾಯ ರೂ.11,54,61,170-00 ಗಳಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರ ಸಂ</th><th>ರಾಜ್ಯ</th><th>ಕ್ಷೇತ್ರ</th><th>ಆಸ್ತಿ/ಜಾಗದ ವಿಸ್ತೀರ್ಣ</th><th>2023-24ನೇ ಸಾಲಿನಲ್ಲಿ ಕಟ್ಟಡಗಳಿಂದ ಬಂದಿರುವ ವಾರ್ಷಿಕ ಆದಾಯ (ರೂ.ಲಕ್ಷಗಳಲ್ಲಿ)</th><th>2024-25 (ಈವರೆವಿಗೆ) ವಾರ್ಷಿಕ ಆದಾಯ</th></tr>
<tr><td rowspan="5">(1)</td><td rowspan="5">ಆಂಧ್ರಪ್ರದೇಶ</td><td>ತಿರುಮಲ</td><td>07 ಎಕರೆ 05 ಸೆಂಟ್ಸ್ (ಗುತ್ತಿಗೆ)</td><td rowspan="2">2,88,96,763-00</td><td rowspan="2">10,77,16,408-00</td></tr>
<tr><td>ತಿರುಪತಿ</td><td>46.05 ಸೆಂಟ್ಸ್</td></tr>
<tr><td>ತಿರುಚಾನೂರು</td><td>0.14 ಸೆಂಟ್ಸ್</td><td>8,50,222-00</td><td>8,69,191.00</td></tr>
<tr><td>ಮಂತ್ರಾಲಯ</td><td>05 ಎಕರೆ</td><td>59,24,275-00</td><td>54,07,640-00</td></tr>
<tr><td>ಶ್ರೀಶೈಲಂ</td><td>02 ಎಕರೆ 04ಸೆಂಟ್ಸ್ (ಗುತ್ತಿಗೆ)</td><td>11,63,700-00</td><td>8,41,300-00</td></tr>
<tr><td>(2)</td><td>ಉತ್ತರಪ್ರದೇಶ</td><td>ವಾರಣಾಸಿ</td><td>1576 ಚ.ಮೀ.</td><td>9,66,200-00</td><td>6,04,131.00</td></tr>
<tr><td rowspan="3">(3)</td><td rowspan="3">ಮಹಾರಾಷ್ಟ್ರ</td><td>ತುಳಜಾಪುರ</td><td>4275 ಚ.ಮೀ.</td><td>51,650-00</td><td>22,500-00</td></tr>
<tr><td>ಗುಡ್ಡಾಪುರ</td><td>79 ಸೆಂಟ್ಸ್</td><td>-</td><td>ದಾಸೋಹ ಭವನ</td></tr>
<tr><td>ಪಂಡರಾಪುರ</td><td>2000 ಚ.ಮೀ</td><td>ಖಾಲಿ ಜಾಗ</td><td>-</td></tr>
<tr><td></td><td colspan="3">ಒಟ್ಟು</td><td>3,78,52,810-00</td><td>11,54,61,170-00</td></tr>
</table>
ಸದರಿ ಹೊರ ರಾಜ್ಯ ಛತ್ರಗಳಿಂದ ಬರುವ ಆದಾಯವನ್ನು ಆಯಾಯ ಛತ್ರಗಳ ದೈನಂದಿನ ನಿರ್ವಹಣೆ, ಅಧಿಕಾರಿ/ಸಿಬ್ಬಂದಿಗಳಿಗೆ ವೇತನ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಸದರಿ ಛತ್ರಗಳಿಂದ ಬರುವ ಆದಾಯವು ಸರ್ಕಾರಕ್ಕೆ ಜಮೆಯಾಗುವುದಿಲ್ಲ.<br><br>
ಗುಡ್ಡಾಪುರದಲ್ಲಿ ಇತ್ತೀಚೆಗೆ ದಿನಾಂಕ:01.08.2024 ರಂದು ದಾಸೋಹ ಭವನವಾಗಿ ಉದ್ಘಾಟನೆಗೊಂಡಿದ್ದು, ಸದರಿ ಕಟ್ಟಡಗಳಿಂದ ಯಾವುದೇ ಆದಾಯವು ಸ್ವೀಕೃತವಾಗಿರುವುದಿಲ್ಲ.
</td></tr>
</table>

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ರಾಜ್ಯ ಸರ್ಕಾರದಿಂದ ಕಾಶಿ ವಿಶ್ವನಾಥ ದೇವಸ್ಥಾನ ಮತ್ತು ತಿರುಪತಿ ದೇವಸ್ಥಾನಗಳಲ್ಲಿ ಕರ್ನಾಟಕ ಭವನಗಳಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು; ಅವುಗಳಿಂದ ಬರುವ ವಾರ್ಷಿಕ ಆದಾಯ ಎಷ್ಟು;</td>
<td>
ಉತ್ತರಪ್ರದೇಶದ ವಾರಣಾಸಿ ಕ್ಷೇತ್ರದಲ್ಲಿನ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದ ಬಳಿ ಮತ್ತು ಆಂಧ್ರಪ್ರದೇಶದ ತಿರುಮಲ ಕ್ಷೇತ್ರದಲ್ಲಿರುವ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನದ ಕೊಠಡಿಗಳ ವಿವರ ಕೆಳಕಂಡಂತಿರುತ್ತದೆ:-
<table>
<tr><th>ಕ್ರ.ಸಂ</th><th>ಕಟ್ಟಡಗಳ ವಿವರ</th><th>ಕೊಠಡಿಗಳ ವಿವರ</th><th>ವಾರ್ಷಿಕ ಆದಾಯ (2024-25)</th></tr>
<tr><td colspan="4">ವಾರಣಾಸಿ ಕರ್ನಾಟಕ ರಾಜ್ಯ ಛತ್ರ</td></tr>
<tr><td>(1)</td><td>ಒಂದನೇ ಕಟ್ಟಡ</td><td>09 ಕೊಠಡಿಗಳು</td><td rowspan="3">6,04,131.00</td></tr>
<tr><td>(2)</td><td>ಎರಡನೇ ಕಟ್ಟಡ</td><td>09 ಕೊಠಡಿಗಳು</td></tr>
<tr><td></td><td>ಒಟ್ಟು</td><td>18 ಕೊಠಡಿಗಳು</td></tr>
<tr><td colspan="4">ತಿರುಮಲ ಕರ್ನಾಟಕ ರಾಜ್ಯ ಛತ್ರ</td></tr>
<tr><td>(1)</td><td>ಹಳೇಬೀಡು (ಕೆಪಿಎಸ್)</td><td>80 ಕೊಠಡಿಗಳು</td><td>1,92,07,920.00</td></tr>
<tr><td>(2)</td><td>ಹಂಪಿ ಬ್ಲಾಕ್</td><td>110 A/C ಕೊಠಡಿಗಳು</td><td>8,75,09,960.00</td></tr>
<tr><td>(3)</td><td>ಐಹೊಳೆ ಬ್ಲಾಕ್</td><td>132 Non A/C ಕೊಠಡಿಗಳು</td><td>9,98,528.00</td></tr>
<tr><td colspan="2">ಒಟ್ಟು</td><td>322 ಕೊಠಡಿಗಳು</td><td></td></tr>
<tr><td>(4)</td><td>ಶ್ರೀ ಕೃಷ್ಣದೇವರಾಯ ಬ್ಲಾಕ್</td><td>36 VVIP ಕೊಠಡಿಗಳ</td><td>ಕಟ್ಟಡದ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ</td></tr>
<tr><td>(5)</td><td>ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ</td><td>ಕಲ್ಯಾಣ ಮಂಟಪದ ಹಾಲ್‌ನಲ್ಲಿ 500 ಮತ್ತು ಡೈನಿಂಗ್ ಹಾಲ್ ನಲ್ಲಿ 500 ಆಸನಗಳು ಸೇರಿ ಒಟ್ಟು 1000 ಆಸನಗಳ ಸಾಮರ್ಥ್ಯವಿರುತ್ತದೆ</td><td>ಕಟ್ಟಡದ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ</td></tr>
</table>
ಉತ್ತರ ಪ್ರದೇಶದ ಕಾಶಿ/ವಾರಣಾಸಿಯಲ್ಲಿ 1928ನೇ ಸಾಲಿನಲ್ಲಿ ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಿಸಿರುವ ಹಳೇ ಕಟ್ಟಡ ಮತ್ತು 2002ರಲ್ಲಿ ನಿರ್ಮಿಸಿರುವ ಕಟ್ಟಡಗಳಿದ್ದು, ಸದರಿ ಕಟ್ಟಡಗಳ ಪೈಕಿ ಹಳೆಯ ಕಟ್ಟಡವು ಭಾಗಶಃ ಕುಸಿದಿರುವ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳ ಹಿತದೃಷ್ಟಿಯಿಂದ ಎರಡು ಕಟ್ಟಡದಲ್ಲಿನ ಕೊಠಡಿಗಳ ಹಂಚಿಕೆಯನ್ನು ದಿನಾಂಕ: 21.09.2024 ರಿಂದ ಸ್ಥಗಿತಗೊಳಿಸಲಾಗಿರುತ್ತದೆ.<br><br>
ತಿರುಮಲ ಕರ್ನಾಟಕ ರಾಜ್ಯ ಛತ್ರದಲ್ಲಿ ಕೈಗೊಳ್ಳಲಾಗುತ್ತಿರುವ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳಲ್ಲಿ ಹಳೇಬೀಡು ಬ್ಲಾಕ್(ಕೆ.ಪಿ.ಎಸ್) ಕಟ್ಟಡದ ನವೀಕರಣ, ಹಂಪಿ ಮತ್ತು ಐಹೊಳೆ ಬ್ಲಾಕ್ ಕಟ್ಟಡದ ಕಾಮಗಾರಿಗಳು 2024-25ನೇ ಸಾಲಿನಲ್ಲಿ ಮುಕ್ತಾಯಗೊಂಡಿದ್ದು ಯಾತ್ರಾರ್ಥಿಗಳಿಗೆ ಆಫ್‌ಲೈನ್ ಮತ್ತು ಆನ್‌ಲೈನ್ ಮೂಲಕ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಉಳಿದಂತೆ ಶ್ರೀ ಕೃಷ್ಣದೇವರಾಯ VVIP ಬ್ಲಾಕ್ ಮತ್ತು ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ ಕಟ್ಟಡದ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು ಸದರಿ ಕಟ್ಟಡಗಳಿಂದ ಪ್ರಸಕ್ತ ಸಾಲಿನಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸಲಾಗುತ್ತಿದೆ.
</td>
</tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಕರ್ನಾಟಕ ಭವನ ಹೊರತುಪಡಿಸಿ ಕಾಶಿ ವಿಶ್ವನಾಥ ಮತ್ತು ತಿರುಪತಿ ದೇವಸ್ಥಾನಗಳಲ್ಲಿರುವ ಇತರೆ ಆಸ್ತಿಗಳೆಷ್ಟು; ಮತ್ತು ಅಲ್ಲಿನ ಕರ್ನಾಟಕ ಭವನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; (ದೇವಸ್ಥಾನವಾರು ಪ್ರತ್ಯೇಕ ಮಾಹಿತಿ ನೀಡುವುದು)</td><td>ಆಂಧ್ರಪ್ರದೇಶ ಮತ್ತು ತಿರುಪತಿಯಲ್ಲಿರುವ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಜಾಗದ ವಿಸ್ತೀರ್ಣವು ಈ ಕೆಳಕಂಡಂತಿರುತ್ತದೆ:-<br>
<table>
<tr><th>ಕ್ರಮ ಸಂಖ್ಯೆ</th><th>ಕ್ಷೇತ್ರ</th><th>ಜಾಗದ ವಿವರ</th></tr>
<tr><td>(1)</td><td>ವಾರಣಾಸಿ</td><td>1576 ಚ.ಮೀ. (ಸ್ವಂತ)</td></tr>
<tr><td>(2)</td><td>ತಿರುಮಲ</td><td>07 ಎಕರೆ 05 ಸೆಂಟ್ಸ್ (ಗುತ್ತಿಗೆ)</td></tr>
<tr><td>(3)</td><td>ತಿರುಚಾನೂರು</td><td>14 ಸೆಂಟ್ಸ್ (ಸ್ವಂತ)</td></tr>
<tr><td>(4)</td><td>ತಿರುಪತಿ</td><td>46 ½ ಸೆಂಟ್ಸ್ (ಸ್ವಂತ)</td></tr>
</table>
<br>ವಾರಣಾಸಿ ಕರ್ನಾಟಕ ರಾಜ್ಯ ಛತ್ರದಲ್ಲಿ 04 ಮಂದಿ ಮತ್ತು ತಿರುಮಲದ ಕರ್ನಾಟಕ ರಾಜ್ಯ ಛತ್ರದಲ್ಲಿ 51 ಮಂದಿ ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>ಈ)</td><td>ಕಾಶಿ ಮತ್ತು ತಿರುಪತಿಯಲ್ಲಿರುವ ಕರ್ನಾಟಕ ಭವನಗಳ ನಿರ್ವಹಣೆಯನ್ನು ಯಾರಿಗೆ ವಹಿಸಲಾಗಿದೆ; 2022-23ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಭವನಗಳ ನಿರ್ವಹಣೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು? (ವರ್ಷವಾರು ಮತ್ತು ಕಾಮಗಾರಿವಾರು ಮಾಹಿತಿ ನೀಡುವುದು)</td><td>ಕಾಶಿ ಮತ್ತು ತಿರುಮಲ ಕರ್ನಾಟಕ ರಾಜ್ಯ ಛತ್ರ/ಕರ್ನಾಟಕ ಭವನಗಳ ನಿರ್ವಹಣೆಯನ್ನು ಧಾರ್ಮಿಕ ದತ್ತಿ ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ.<br><br>
ಪ್ರಸ್ತುತ ತಿರುಮಲ ಕರ್ನಾಟಕ ರಾಜ್ಯ ಛತ್ರದಲ್ಲಿ ಹೊಸದಾಗಿ ನವೀಕರಿಸಿರುವ ಹಳೇಬೀಡು (ಕೆಪಿಎಸ್) ಮತ್ತು ಹೊಸದಾಗಿ ನಿರ್ಮಾಣವಾಗಿರುವ ಹಂಪಿ ಮತ್ತು ಐಹೊಳೆ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಯನ್ನು ಇ-ಟೆಂಡರ್ ಮೂಲಕ M/S Xeon Systems, Bengaluru, ಸಂಸ್ಥೆಯವರಿಗೆ ವಹಿಸಲಾಗಿರುತ್ತದೆ.<br><br>
ತಿರುಮಲ ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಛತ್ರದ ದೈನಂದಿನ ನಿರ್ವಹಣೆಯ ವೆಚ್ಚಗಳಿಗಾಗಿ 2022-23ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.<br>
<table>
<tr><th>ವರ್ಷ</th><th>ಬಿಡುಗಡೆಯಾಗಿರುವ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>2022-23</td><td>ಇಲ್ಲ</td></tr>
<tr><td>2023-24</td><td>200-00</td></tr>
<tr><td>2024-25</td><td>200-00</td></tr>
<tr><td>ಒಟ್ಟು</td><td>400-00</td></tr>
</table>
<br>ವಾರಣಾಸಿ ಕರ್ನಾಟಕ ರಾಜ್ಯ ಛತ್ರದ ನಿರ್ವಹಣೆಯ ವೆಚ್ಚವನ್ನು ರಾಜ್ಯ ಛತ್ರದ ಆದಾಯದಿಂದ ಭರಿಸಲಾಗುತ್ತಿದೆ.<br><br>
ದಿನಾಂಕ:29.10.2024 ರಂದು ಮಾನ್ಯ ಧಾರ್ಮಿಕ ದತ್ತಿ ಹಾಗೂ ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತಾಂತ್ರಿಕ ತಂಡವು ಕರ್ನಾಟಕ ರಾಜ್ಯ ಛತ್ರದ ಹಳೆಯ ಕಟ್ಟಡದ ಸಂಪೂರ್ಣ ಭಾಗ ಶಿಥಿಲಗೊಂಡಿದ್ದು, ಕಟ್ಟಡದ ಬಹುಭಾಗಗಳಲ್ಲಿ ಬಿರುಕು ಬಂದಿದ್ದು, ಸದರಿ ಕಟ್ಟಡವನ್ನು 1928ರಲ್ಲಿ ನಿರ್ಮಿಸಲಾಗಿದ್ದು ಸದರಿ ಕಟ್ಟಡವು ಸಾಮರ್ಥ್ಯ ಕಳೆದು ಕೊಂಡಿರುವುದರಿಂದ ಕುಸಿದು ಬೀಳುವ ಸಾಧ್ಯತೆ ಇದ್ದು, ಸದರಿ ಸ್ಥಳದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸುವುದು ಸೂಕ್ತವೆಂದು ಲೋಕೋಪಯೋಗಿ ಇಲಾಖೆಯವರು ಅಭಿಪ್ರಾಯ ಪಟ್ಟಿದ್ದು, ಈ ಬಗ್ಗೆ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಸಭೆಯಲ್ಲಿ ಚರ್ಚಿಸಿ ಮಾನ್ಯ ಸಚಿವರು ಸೂಚಿಸಿರುವಂತೆ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಅತಿಥಿ ಗೃಹದ ಬಿದ್ದು ಹೋಗಿರುವ ತಡೆಗೋಡೆ ಮತ್ತು ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸದಾಗಿ ಅತಿಥಿ ಗೃಹ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ.<br><br>ಅದರಂತೆ, ಮುಖ್ಯ ವಾಸ್ತು ಶಿಲ್ಪಿಗಳು ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸದರಿ ಸ್ಥಳ ಪರಿವೀಕ್ಷಣೆ ಮಾಡಿ ಸದರಿ ಕಟ್ಟಡದ ಸಂಪೂರ್ಣ ನಕ್ಷೆ ತಯಾರಿಸಿ ಕೊಡುವಂತೆ ಮುಖ್ಯ ವಾಸ್ತು ಶಿಲ್ಪಿ ರವರಿಗೆ ಸೂಚಿಸಲಾಗಿತ್ತು. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಕಟ್ಟಡಗಳ ವಿಭಾಗ -1, ಬೆಂಗಳೂರು ಇವರು ಸದರಿ ಸ್ಥಳದ ಮಣ್ಣು ಪರೀಕ್ಷೆಗಳನ್ನು ಮಾಡಿಸಿ ವಿನ್ಯಾಸ ನಕ್ಷೆಗಳಂತೆ ತಡೆಗೋಡೆ ನಿರ್ಮಿಸುವ ಕಾಮಗಾರಿಗೆ ಅಂದಾಜು ಮೊತ್ತ ರೂ.1850.00ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, 2025-26 ನೇ ಸಾಲಿನ ಆಯವ್ಯಯದ ಕ್ರಿಯಾ ಯೋಜನೆಯಲ್ಲಿ ಪರಿಗಣಿಸಲು ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಕಂಇ 92 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

ಅನುಬಂಧ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1348

ಉತ್ತರ ಪ್ರದೇಶ ವಾರಣಾಸಿ ಕರ್ನಾಟಕ ರಾಜ್ಯ ಛತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ.ಗಳ ವಿವರ

| ಕ್ರಮ ಸಂಖ್ಯೆ | ಹೆಸರು ಶ್ರೀ/ಶ್ರೀಮತಿ | ಹುದ್ದೆ |
|---|---|---|
| (1) | ಟಿ.ಕೃಷ್ಣಮೂರ್ತಿ | ವ್ಯವಸ್ಥಾಪಕರು(ಹೆಚ್ಚುವರಿ ಪ್ರಭಾರ) |
| (2) | ಅರುಣ್ ಕುಮಾರ್ | ಸಹಾಯಕರು |
| (3) | ಕೇದಾರನಾಥ್ | ಅರ್ಚಕರು |
| (4) | ಸುಮನ್ ಸಹಾನಿ | ಸ್ಕಾವೆಂಜರ್ |
| (5) | ಸುನೀತ | ಸ್ವೀಪರ್ |

ಆಂಧ್ರಪ್ರದೇಶ, ತಿರುಮಲ ಮತ್ತು ತಿರಚಾನೂರು ಕರ್ನಾಟಕ ರಾಜ್ಯ ಛತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ /ಸಿಬ್ಬಂದಿಗಳ ವಿವರ

| ಕ್ರ ಸಂ | ಸಿಬ್ಬಂದಿ ವರ್ಗದವರ ಹೆಸರು | ಪದನಾಮ |
|---|---|---|
| 1. | ಶ್ರೀ ಕೆ. ಕೋದಂಡರಾಮ್ | ವಿಶೇಷ ಅಧಿಕಾರಿ |
| 2. | ಶ್ರೀ ಡಿ.ಎನ್. ಜಾಧವ್ | ಉಪ ವಿಶೇಷ ಅಧಿಕಾರಿ |
| 3. | ಶ್ರೀ ಟಿ. ಕೃಷ್ಣಮೂರ್ತಿ | ಪ್ರ.ದ.ಸ |
| 4. | ಶ್ರೀ ಹನುಮಂತರಾಯ | ದ್ವಿ.ದ.ಸ |
| 5. | ಶ್ರೀ ಕೆ. ಆನಂದ ರೆಡ್ಡಿ | ಗ್ರೂಪ್ "ಡಿ" |
| 6. | ಶ್ರೀ ಎನ್. ಮುನಿವೇಲು | ಸ್ಯಾನಿಟರಿ ಇನ್ಸ್‌ಪೆಕ್ಟರ್ |
| 7. | ಶ್ರೀ ಪಿ. ರೆಡ್ಡಪ್ಪ | ವಾಟರ್ ಫಿಟ್ಟರ್ |
| 8. | ಶ್ರೀ ಜಿ.ಸಿ. ಚಂದ್ರಶೇಖರ್ | ಎಲೆಕ್ಟ್ರಿಷಿಯನ್ |
| 9. | ಆರ್. ನಾಗರಾಜ | ಸಹಾಯಕ ವ್ಯವಸ್ಥಾಪಕ |
| 10. | ಬಿ. ನಾಗರಾಜು | ಸಹಾಯಕ ವ್ಯವಸ್ಥಾಪಕ |
| 11. | ವಿ. ಸುಧಾಕರ | ಸಹಾಯಕ ವ್ಯವಸ್ಥಾಪಕ |
| 12. | ಇ. ಕುಮಾರ್ | ಸ್ವಚ್ಛತಾ ಮೇಲ್ವಿಚಾರಕ |
| 13. | ವಿ ಮುರಳಿ | ಸಹಾಯಕ ವ್ಯವಸ್ಥಾಪಕ |
| 14. | ಆರ್. ಶ್ರೀರಾಮುಲು | ಸ್ವಚ್ಛತಾ ಮೇಲ್ವಿಚಾರಕ |
| 15. | ಎನ್. ಅನಸೂಯಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 16. | ವೆಂಕಟಸುಬ್ಬ ಜೆ. | ಸ್ವಚ್ಛತಾ ಮೇಲ್ವಿಚಾರಕ |
| 17. | ರೆಡ್ಡಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 18. | ಕೆ. ಪವನ್ ಕುಮಾರ್ ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 19. | ಎಸ್. ವೇಣುಗೋಪಾಲ್ ರೆಡ್ಡಿ | ಸ್ವಚ್ಛತಾ ಮೇಲ್ವಿಚಾರಕ |
| 20. | ಆರ್. ಚಂದ್ರಶೇಖರ್ | ಸಹಾಯಕ ವ್ಯವಸ್ಥಾಪಕ |
| 21. | ಆರ್. ಮುನೀಶ್ವರಯ್ಯ | ಸಹಾಯಕ ವ್ಯವಸ್ಥಾಪಕ |
| 22. | ಜಿ.ಸುಬ್ರಹ್ಮಣ್ಯಂ ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 23. | ಎಸ್. ಹಿಮಕುಮಾರ್ | ಸ್ವಚ್ಛತಾ ಮೇಲ್ವಿಚಾರಕ |
| 24. | ಆರ್. ಆನಂದ್ | ಸ್ವಚ್ಛತಾ ಮೇಲ್ವಿಚಾರಕ |
| 25. | ಡಿ. ಗಿರಿಬಾಬು | ಸಹಾಯಕ ವ್ಯವಸ್ಥಾಪಕ |
| 26. | ಎಂ. ಕೇಶವಲು ರೆಡ್ಡಿ | ಸಹಾಯಕ ವ್ಯವಸ್ಥಾಪಕ |
| 27. | ಎಂ. ಹೊನ್ನೂರು ಸ್ವಾಮಿ | ಸ್ವಚ್ಛತಾ ಮೇಲ್ವಿಚಾರಕ |
| 28. | ವಿ. ಶಶಿಕುಮಾರ್ | ಸಹಾಯಕ ವ್ಯವಸ್ಥಾಪಕ |
| 29. | ವಿ. ರಮಣ | ಸ್ವಚ್ಛತಾ ಮೇಲ್ವಿಚಾರಕ |
| 30. | ಕೆ. ರವಿ | ಸ್ವಚ್ಛತಾ ಮೇಲ್ವಿಚಾರಕ |
| 31. | ಎಸ್. ನಾಗೇಶ್ವರ್ ರಾವ್ | ಸ್ವಚ್ಛತಾ ಮೇಲ್ವಿಚಾರಕ |
| 32. | ಎನ್. ನಾಂಚಾರಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 33. | ಜಿ. ಅಲುವೇಲಮ್ಮ | ಸ್ವಚ್ಛತಾ ಮೇಲ್ವಿಚಾರಕ |

| | | |
|---|---|---|
| 34. | ಆರ್. ಸುನೀತ | ಸಹಾಯಕ ವ್ಯವಸ್ಥಾಪಕ |
| 35. | ಪಿ. ವೆಂಕಟೇಶ್ವರ | ಸ್ವಚ್ಛತಾ ಮೇಲ್ವಿಚಾರಕ |
| 36. | ಕೆ. ಸುರೇಂದ್ರಬಾಬು | ಸಹಾಯಕ ವ್ಯವಸ್ಥಾಪಕ |
| 37. | ಪಿ. ಸುಬ್ರಹ್ಮಣ್ಯಂ | ಸ್ವಚ್ಛತಾ ಮೇಲ್ವಿಚಾರಕ |
| 38. | ಪಿ. ನಿರ್ಮಲ | ಸ್ವಚ್ಛತಾ ಮೇಲ್ವಿಚಾರಕ |
| 39. | ಇ. ಚಿರಂಜೀವಿ | ಸ್ವಚ್ಛತಾ ಮೇಲ್ವಿಚಾರಕ |
| 40. | ಪಿ. ರಮಣಮ್ಮ | ಸ್ವಚ್ಛತಾ ಮೇಲ್ವಿಚಾರಕ |
| 41. | ಎ. ಅಮೃತ | ಸ್ವಚ್ಛತಾ ಮೇಲ್ವಿಚಾರಕ |
| 42. | ಬಿ. ಗೌತಮ್ | ಅಟೆಂಡರ್ |
| 43. | ಎನ್. ಮಂಜುನಾಥ್ | ಸ್ವಚ್ಛತಾ ಮೇಲ್ವಿಚಾರಕ |
| 44. | ಕೆ. ಸುಬ್ರಹ್ಮಣ್ಯ ರೆಡ್ಡಿ | ಸ್ವಚ್ಛತಾ ಮೇಲ್ವಿಚಾರಕ |
| 45. | ಗೋಪಿನಾಥ್ ರಾವ್ | ನವಗ್ರಹ ಅರ್ಚಕ |
| 46. | ಪಿ. ಜ್ಯೋತಿ | ಸ್ವಚ್ಛತಾ ಮೇಲ್ವಿಚಾರಕ |
| 47. | ಕೆ. ಮುರಳಿ | ಸ್ವಚ್ಛತಾ ಮೇಲ್ವಿಚಾರಕ |
| 48. | ಎಂ. ರಮಣ | ಸ್ವಚ್ಛತಾ ಮೇಲ್ವಿಚಾರಕ |
| 49. | ಎಂ. ರಾಮಾಂಜಲು | ಸ್ವಚ್ಛತಾ ಮೇಲ್ವಿಚಾರಕ |
| 50. | ಕೆ. ಹರೀಶ್ | ಪ್ರೊಟೋಕಾಲ್ ಅಟೆಂಡರ್ |
| 51. | ಕೆ. ಶಿವಪ್ರಸಾದ್ | ಸ್ವಚ್ಛತಾ ಮೇಲ್ವಿಚಾರಕ |

ಆಯುಕ್ತರ ಪರವಾಗಿ
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು

Scanned with CamScanner

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1348*
## ಪೂರಕ ಟಿಪ್ಪಣಿ

ಕರ್ನಾಟಕ ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿರುವ ಹೊರ ರಾಜ್ಯಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರದ ವಿವರಗಳು ಈ ಕೆಳಕಂಡಂತಿರುತ್ತದೆ. ಸದರಿ ಕರ್ನಾಟಕ ರಾಜ್ಯ ಛತ್ರಗಳಲ್ಲಿ ಕರ್ನಾಟಕ ರಾಜ್ಯದಿಂದ ದೇವರ ದರ್ಶನಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

| ಕ್ರ ಸಂ | ರಾಜ್ಯ | ಕ್ಷೇತ್ರ |
|---|---|---|
| (1) | ಆಂಧ್ರಪ್ರದೇಶ | ತಿರುಮಲ, ತಿರುಚಾನೂರು, ಮಂತ್ರಾಲಯ, ಶ್ರೀಶೈಲಂ |
| (2) | ಉತ್ತರಪ್ರದೇಶ | ವಾರಣಾಸಿ |
| (3) | ಮಹಾರಾಷ್ಟ್ರ | ತುಳಜಾಪುರ, ಗುಡ್ಡಾಪುರ |

ಹೊರ ರಾಜ್ಯಗಳಲ್ಲಿರುವ ಮುಜರಾಯಿ ಇಲಾಖೆಯ ಕರ್ನಾಟಕ ರಾಜ್ಯ ಛತ್ರದ ಆಸ್ತಿ/ಜಾಗದ ವಿವರ ಮತ್ತು ಸದರಿ ಆಸ್ತಿಯಲ್ಲಿರುವ ಕಟ್ಟಡಗಳಿಂದ 2023-24 ಸ್ವೀಕೃತವಾಗಿರುವ ಆದಾಯ **ರೂ.3,78,52,810-00-00** ಗಳು ಮತ್ತು 2024-25ನೇ ಸಾಲಿನ ಆದಾಯ **ರೂ.11,54,61,170-00** ಗಳಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ:-

**(ರೂ.ಲಕ್ಷಗಳಲ್ಲಿ)**

| ಕ್ರ ಸಂ | ರಾಜ್ಯ | ಕ್ಷೇತ್ರ | ಆಸ್ತಿ/ಜಾಗದ ವಿಸ್ತೀರ್ಣ | 2023-24ನೇ ಸಾಲಿನಲ್ಲಿ ಕಟ್ಟಡಗಳಿಂದ ಬಂದಿರುವ ವಾರ್ಷಿಕ ಆದಾಯ | ವಾರ್ಷಿಕ ಆದಾಯ 2024-25 (ಈವರೆವಿಗೆ) |
|---|---|---|---|---|---|
| (1) | ಆಂಧ್ರಪ್ರದೇಶ | ತಿರುಮಲ | 07 ಎಕರೆ 05 ಸೆಂಟ್ಸ್ (ಗುತ್ತಿಗೆ) | 2,88,96,763-00 | 10,77,16,408-00 |
| | | ತಿರುಪತಿ | 46.05 ಸೆಂಟ್ಸ್ | | |
| | | ತಿರುಚಾನೂರು | 0.14 ಸೆಂಟ್ಸ್ | 8,50,222-00 | 8,69,191.00 |
| | | ಮಂತ್ರಾಲಯ | 05 ಎಕರೆ | 59,24,275-00 | 54,07,640-00 |
| | | ಶ್ರೀಶೈಲಂ | 02 ಎಕರೆ 04ಸೆಂಟ್ಸ್ (ಗುತ್ತಿಗೆ) | 11,63,700-00 | 8,41,300-00 |
| (2) | ಉತ್ತರಪ್ರದೇಶ | ವಾರಣಾಸಿ | 1576 ಚ.ಮೀ. | 9,66,200-00 | 6,04,131.00 |
| (3) | ಮಹಾರಾಷ್ಟ್ರ | ತುಳಜಾಪುರ | 4275 ಚ.ಮೀ. | 51,650-00 | 22,500-00 |
| | | ಗುಡ್ಡಾಪುರ | 79 ಸೆಂಟ್ಸ್ | - | ದಾಸೋಹ ಭವನ |
| | | ಪಂಡರಾಪುರ | 2000ಚ.ಮೀ | ಖಾಲಿ ಜಾಗ | - |
| | **ಒಟ್ಟು** | | | **3,78,52,810-00** | **11,54,61,170-00** |

**ಉತ್ತರಪ್ರದೇಶದ ವಾರಣಾಸಿಯ ಕರ್ನಾಟಕ ರಾಜ್ಯ ಛತ್ರ:**

ಉತ್ತರ ಪ್ರದೇಶದ ಕಾಶಿ/ವಾರಣಾಸಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸೇರಿದ 1576 ಚ.ಮೀ. ಜಾಗವಿದ್ದು, ಸದರಿ ಜಾಗದಲ್ಲಿ 1928ನೇ ಸಾಲಿನಲ್ಲಿ ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಿಸಿರುವ 09 ಕೊಠಡಿಗಳ ಹಳೆಯ ಕಟ್ಟಡ ಮತ್ತು 2002ರಲ್ಲಿ ನಿರ್ಮಿಸಿರುವ 09 ಕೊಠಡಿಗಳ ಕಟ್ಟಡ ಸೇರಿ ಒಟ್ಟಾರೆ 18 ಕೊಠಡಿಗಳಿರುತ್ತವೆ. ಸದರಿ ಕಟ್ಟಡಗಳಿಂದ 2024-25ನೇ ಸಾಲಿನಲ್ಲಿ ದಿನಾಂಕ:20.09.2024 ರವರೆಗೆ ರೂ.6,04,131.00ಗಳ ಆದಾಯವು ಸ್ವೀಕೃತವಾಗಿರುತ್ತದೆ.

....2

ಸದರಿ ಕಟ್ಟಡಗಳ ಪೈಕಿ ಹಳೆಯ ಕಟ್ಟಡವು ಭಾಗಶಃ ಕುಸಿದಿರುವ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳ ಭದ್ರತಾ ಹಿತದೃಷ್ಟಿಯಿಂದ ಎರಡು ಕಟ್ಟಡದಲ್ಲಿನ ಕೊಠಡಿಗಳ ಹಂಚಿಕೆಯನ್ನು ದಿನಾಂಕ: 21.09.2024 ರಿಂದ ಸ್ಥಗಿತಗೊಳಿಸಲಾಗಿರುತ್ತದೆ

2024-25ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-410ರಲ್ಲಿನ ಘೋಷಣೆಯಂತೆ ವಾರಣಾಸಿಯಲ್ಲಿ ಕರ್ನಾಟಕ ರಾಜ್ಯ ಛತ್ರದ ಅಭಿವೃದ್ಧಿ ಕಾಮಗಾರಿಗಳನ್ನು ರೂ.5.00 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಯೋಜನೆಯನ್ನು ಅನುಷ್ಠಾನಗೊಳಿಸಲು **ತಾತ್ವಿಕ ಅನುಮೋದನೆ** ನೀಡಲಾಗಿರುತ್ತದೆ.

ಸದರಿ ಸ್ಥಳದ ಅವಶ್ಯವಿರುವ ಮಣ್ಣು ಪರೀಕ್ಷೆಗಳನ್ನು ಮಾಡಿ ವಿನ್ಯಾಸ ನಕ್ಷೆಗಳಂತೆ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ತಡೆಗೋಡೆ (for **construction of Retaining wall**) ನಿರ್ಮಾಣ ಕಾಮಗಾರಿಗಾಗಿ ರೂ.1850.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರು ತಯಾರಿಸಿದ್ದು, ರೂ.1850.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಉದ್ದೇಶಿತ ಕಾಮಗಾರಿಯನ್ನು ಕೈಗೊಳ್ಳಲು ರೂ.500.00 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಗೆ ಠೇವಣಿ ಇಡಲು ಅನುವಾಗುವಂತೆ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿರುತ್ತದೆ. ಆದರೆ ಆರ್ಥಿಕ ಇಲಾಖೆಯು "ವಾರಣಾಸಿಯಲ್ಲಿತೀವ್ರ ಮಳೆಯಿಂದಾಗಿ ಕರ್ನಾಟಕ ರಾಜ್ಯ ಛತ್ರದ ಒಂದು ಭಾಗ ಕುಸಿದು ಹೋಗಿರುವುದರಿಂದ ವಾರಣಾಸಿಯಲ್ಲಿ ನಿರ್ಮಾಣ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಗೆ ಠೇವಣಿ ಇಡಲು ಪ್ರಸ್ತಾಪಿಸಿರುವ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ. ಮುಂದುವರೆದು, 2025-26ನೇ ಸಾಲಿನ ಆಯವ್ಯಯಕ್ಕೆ ಸಂಬಂಧಿಸಿದತೆ ತಯಾರಿಸುವ ಕ್ರಿಯಾಯೋಜನೆಯಲ್ಲಿ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಗಣಿಸುವಂತೆ ತಿಳಿಸಿರುತ್ತದೆ.

**ವಾರಣಾಸಿ** ಕರ್ನಾಟಕ ರಾಜ್ಯ ಛತ್ರದ ನಿರ್ವಹಣೆಯ ವೆಚ್ಚಗಳಿಗಾಗಿ 2022-23ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

**<u>ಆಂದ್ರಪ್ರದೇಶ ತಿರುಮಲ ಕರ್ನಾಟಕ ರಾಜ್ಯ ಛತ್ರ:-</u>**

ಆಂದ್ರಪ್ರದೇಶದ ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರದ 7 ಎಕರೆ 05 ಸೆಂಟ್ಸ್ ಜಾಗದಲ್ಲಿ ಆಂಧ್ರಪ್ರದೇಶದ **ತಿರುಮಲ** ಕ್ಷೇತ್ರಕ್ಕೆ ಕರ್ನಾಟಕ ರಾಜ್ಯದಿಂದ ಹೋಗುವ ಜನರಿಗೆ ವಸತಿ ಸೌಲಭ್ಯ ಕಲ್ಪಿಸಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಸರ್ಕಾರವು ಅಂದಾಜು ರೂ.200.00 ಕೋಟಿ (GST ಹೊರತುಪಡಿಸಿ) ಗಳ ವೆಚ್ಚದಲ್ಲಿ ಈ ಕೆಳಕಂಡ ವಿವರದಂತೆ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

| ಕ್ರ. ಸಂ. | ಕಟ್ಟಡಗಳ ವಿವರ | ಕೊಠಡಿಗಳ ವಿವರ | ವಾರ್ಷಿಕ ಆದಾಯ (2024-25) |
|---|---|---|---|
| (1) | ಹಳೇಬೀಡು (ಕೆಪಿಎಸ್) | 80 ಕೊಠಡಿಗಳು | 8,50,222-00 |
| (2) | ಹಂಪಿ ಬ್ಲಾಕ್ | 110A/C ಕೊಠಡಿಗಳು | 59,24,275-00 |
| (3) | ಐಹೊಳೆ ಬ್ಲಾಕ್ | 132 Non A/C ಕೊಠಡಿಗಳು | 11,63,700-00 |
| | **ಒಟ್ಟು** | **322 ಕೊಠಡಿಗಳು** | |
| (4) | ಶ್ರೀ ಕೃಷ್ಣದೇವರಾಯ ಬ್ಲಾಕ್ | 36 VVIP ಕೊಠಡಿಗಳು | ಕಟ್ಟಡದ ಮಗಾರಿಯು **ಮುಕ್ತಾಯ ಹಂತದಲ್ಲಿರುತ್ತದೆ** |
| (5) | ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ | ಕಲ್ಯಾಣ ಮಂಟಪದ ಹಾಲ್‌ನಲ್ಲಿ 500 ಮತ್ತು ಡೈನಿಂಗ್ ಹಾಲ್ ನಲ್ಲಿ 500 ಆಸನಗಳು ಸೇರಿ ಒಟ್ಟು 1000 ಆಸನಗಳ ಸಾಮರ್ಥ್ಯವಿರುತ್ತದೆ | ಕಟ್ಟಡದ ಕಾಮಗಾರಿಯು **ಮುಕ್ತಾಯ ಹಂತದಲ್ಲಿರುತ್ತದೆ** |

....3

ಮೇಲ್ಕಂಡ ಕಾಮಗಾರಿಗಳಲ್ಲಿ ಹಳೇಬೀಡು ಬ್ಲಾಕ್(ಕೆ.ಪಿ.ಎಸ್) ಕಟ್ಟಡದ ನವೀಕರಣ, ಹಂಪಿ ಮತ್ತು ಐಹೊಳೆ ಬ್ಲಾಕ್ ಕಟ್ಟಡದ ಕಾಮಗಾರಿಗಳು 2024-25ನೇ ಸಾಲಿನಲ್ಲಿ ಮುಕ್ತಾಯಗೊಂಡಿದ್ದು ಲೋಕಾರ್ಪಣೆಯಾಗಿ ಯಾತ್ರಾರ್ಥಿಗಳಿಗೆ ಆಫ್ ಲೈನ್ ಮತ್ತು ಆನ್ ಲೈನ್ ಮೂಲಕ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಯಾತ್ರಾರ್ಥಿಗಳು ಆನ್ ಲೈನ್ ಮೂಲಕ ಮುಂಗಡವಾಗಿ karnatakatemplesaccomadation.com ರಲ್ಲಿ ಕಾಯ್ದಿರಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಹಾಗೂ ಸದರಿ ಕಟ್ಟಡಗಳ ಸ್ವಚ್ಛತಾ ನಿರ್ವಹಣೆ (House keeping)ಯನ್ನು ಇ-ಟೆಂಡರ್ ಮೂಲಕ M/S Xeon Systems, ಬೆಂಗಳೂರು ಇವರಿಗೆ ವಹಿಸಲಾಗಿರುತ್ತದೆ.

ಉಳಿದಂತೆ, ಶ್ರೀ ಕೃಷ್ಣ ದೇವರಾಯ VVIP ಬ್ಲಾಕ್ ಮತ್ತು ಶ್ರೀ ಕೃಷ್ಣ ರಾಜೇಂದ್ರ ಒಡೆಯರ್ ಕಲ್ಯಾಣ ಮಂಟಪ ಕಟ್ಟಡದ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು ಕಾಮಗಾರಿಗಳು ಪೂರ್ಣಗೊಂಡ ನಂತರ ಲೋಕಾರ್ಪಣೆ ಮಾಡಿ ಯಾತ್ರಾರ್ಥಿಗಳಿಗೆ ವಾಸ್ತವ್ಯಕ್ಕೆ ಅನುವು ಮಾಡಿಕೊಡಲಾಗುವುದು. ಸದರಿ ಕಟ್ಟಡಗಳಿಂದ ಪ್ರಸಕ್ತ ಸಾಲಿನಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸಲಾಗುತ್ತಿದೆ.

**ತಿರುಮಲ** ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಛತ್ರದ ದೈನಂದಿನ ನಿರ್ವಹಣೆಯ ವೆಚ್ಚಗಳಿಗಾಗಿ 2022-23ನೇ ಸಾಲಿನಿಂದ ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

| ವರ್ಷ | ಬಿಡುಗಡೆಯಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|
| 2022-23 | ಇಲ್ಲ |
| 2023-24 | 200-00 |
| 2024-25 | 200-00 |
| **ಒಟ್ಟು** | **400-00** |

*******